# ಕನ್ನಡ ಶಾಸನಗಳಲ್ಲಿ ಸಾಹಿತ್ಯಾಂಶ

**ಜ್ಯೋತಿಲಕ್ಷ್ಮಿ ಹೆಚ್.***

**DOI: https://doi.org/10.5281/zenodo.21793450**

**ABSTRACT**

ಶಾಸನಗಳು ರಾಜರು, ರಾಣಿಯರಲ್ಲದೆ ಇತರೆ ಅಧಿಕಾರಿಗಳು ತಮ್ಮ ಆಜ್ಞೆಗಳು, ದಾನಗಳನ್ನು ಪ್ರಜೆಗಳ ಗಮನಕ್ಕೆ ತರಲು ತಾಳೆಗರಿ, ಮರ, ಕಾಗದ, ಲೋಹಗಳು ಮತ್ತು ಶಿಲೆಗಳ ಮೇಲೆ ಲಿಖಿತ ರೂಪದಲ್ಲಿ ಬರೆಯಿಸಿ ಬಹುಕಾಲ ಉಳಿಯುವಂತೆ ಪ್ರಕಟಿಸಲಾಗುತ್ತಿದ್ದ ದಾಖಲೆ. ಕರ್ನಾಟಕದಲ್ಲಿ ಕಲ್ಲಿನ ಮೇಲೆ, ಸ್ತಂಭಗಳ ಮೇಲೆ ದೇವಾಲಯಗಳ ಗೋಡೆಗಳ ಮೇಲೆ, ವಿಗ್ರಹದ ಪೀಠಗಳ ಮೇಲೆ, ತಾಮ್ರಪಟಗಳ ಮೇಲೆ, ಪಾತ್ರೆಗಳಮೇಲೆ ಮಡಿಕೆಗಳ ಮೇಲೆ ಶಾಸನಗಳು ದೊರಕಿವೆ, ಇವುಗಳು ಇಂದು ರಾಜಮನೆತನಗಳ ಚರಿತ್ರೆಯ ವಿವರಗಳನ್ನು ನೀಡುವುದಲ್ಲದೆ ವಿವಿಧ ಭಾಷೆಗಳ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ನೀಡುತ್ತವೆ. ಕನ್ನಡ ಶಾಸನಗಳಲ್ಲಿ ಹುದುಗಿರುವ ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ, ಆರ್ಥಿಕ, ರಾಜಕೀಯ ಅಂಶಗಳನ್ನು ಅಧ್ಯಯನ ಮಾಡುತ್ತಿರುವುದು ವಿವಿಧ ಅಧ್ಯಯನ ಶಿಸ್ತುಗಳಲ್ಲಿ ಹೆಚ್ಚು ಆಸಕ್ತಿಯ ವಿಷಯವಾಗಿದೆ. ಆ ನಿಟ್ಟಿನಲ್ಲಿ ಈ ಸಂಶೋಧನಾ ಪ್ರಬಂಧವು ಶಾಸನದ ಅರ್ಥ, ಅವುಗಳನ್ನು ನೆಡುವ ಉದ್ದೇಶ, ವಿವಿಧ ಪ್ರಾಚೀನ ಗ್ರಂಥಗಳಲ್ಲಿ ಅದರ ವ್ಯಾಖ್ಯಾನ, ಶಾಸನಗಳ ಆರಂಭ ಮತ್ತು ಅವಶ್ಯಕತೆ, ಶಾಸನಗಳಲ್ಲಿ ಕವಿಗಳು ಮತ್ತು ವಿದ್ವಾಂಸರು ನಿರೂಪಿಸಿರುವ ಲಿಪಿ, ಭಾಷೆ, ವಾಕ್ಯ ರಚನೆ, ವರ್ಣನೆ, ಪಂಪ, ರನ್ನ, ಜನ್ನ, ಮೊದಲಾದ ಉದ್ದಾಮ ಕವಿಗಳಲ್ಲಿ ಕಂಡುಬರುವ ಪ್ರೌಢವಾದ ಶೈಲಿ ಉಪಮೇ, ರೂಪಕ, ಉತ್ಪ್ರೇಕ್ಷೆ, ಶ್ಲೇಷ ಮುಂತಾದ ಅಲಂಕಾರಗಳಿಂದ ಕೂಡಿದೆ. ಸುಂದರವಾದ ವರ್ಣನೆ ಭವ್ಯವಾದ ಕಲ್ಪನಾ ವಿನ್ಯಾಸ ಹೃದಯವಾದ ಭಾವಸೌಂದರ್ಯ ಮುಂತಾದವುಗಳಿಂದ ತುಂಬಿವೆ. ಸಾಮಾನ್ಯವಾಗಿ ಪ್ರತಿಯೊಂದು ಶಾಸನದಲ್ಲಿ ವೀರರ ಪ್ರತಾಪ, ಸ್ಥಾವಾಚಾರ್ಯರ ಪ್ರಭಾವ, ದೇವಾಲಯಗಳ ಘನತೆ, ದತ್ತಿಗಳ ವಿವರ, ರಾಜರ ವಂಶಗಳ ವಿವರ ಇತ್ಯಾದಿ ವಿಷಯ ವರ್ಣನೆಗಳಿಂದ ಕೂಡಿದ್ದರೂ ಒಂದೊಂದರಲ್ಲಿಯೂ ಒಂದಿಲ್ಲೊಂದು ದೃಷ್ಟಿಯಿಂದ ಸಾಹಿತ್ಯಾಂಶವಿರುವುದನ್ನು

* **ಜ್ಯೋತಿಲಕ್ಷ್ಮಿ ಹೆಚ್.,** ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

ಈ ಪ್ರಬಂಧವು ಓದುಗರ ಗಮನ ಸೆಳೆಯುತ್ತದೆ.

**KEYWORDS:** ಶಾಸನಗಳು, ರಾಜಾಜ್ಞೆಗಳು, ಆಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು.

---

ಶಾಸನ ಎಂಬ ಪದದ ಮೂಲಾರ್ಥ 'ಆಜ್ಞೆ' ಎಂದು ಅಂದರೆ ಶಾಸನ ರಾಜರ ಆಜ್ಞೆಗಳನ್ನು ತಿಳಿಸುವ ಬರಹವನ್ನು ಹೇಳುತ್ತದೆ. ಶಾಸ್ ಎಂಬ ಸಂಸ್ಕೃತ (ಪದಕ್ಕೆ) ಧಾತುವಿಗೆ ಆಜ್ಞೆಮಾಡು ಶಿಕ್ಷಿಸು, ನಿಯಂತ್ರಿಸು ಮುಂತಾದ ಅರ್ಥಗಳಿವೆ. ಶಾಸನ ಎಂಬುದನ್ನು ಬ್ರಿಟಾನಿಕ ವಿಶ್ವಕೋಶದಲ್ಲಿ ವಿವರಿಸಿದಂತೆ ತಾಳೆಗರಿ, ಭೂರ್ಜಪತ್ರ ಕಾಗದ ಮುಂತಾದವುಗಳ ಮೇಲೆ ಕಂಡುಬರುವ ಬರಹಗಳನ್ನು ಬಿಟ್ಟು ಬಹುಕಾಲ ಉಳಿಯುವ ಸಾಮಗ್ರಿಯಮೇಲೆ ಬರೆದಿರುವ ಬರಹಗಳನ್ನು ಶಾಸನಗಳೆಂದು ಸ್ಥೂಲವಾಗಿ ಕರೆಯಬಹುದು.

ರಾಜರ ಶಾಸನಗಳನ್ನು, ರಾಜಾಜ್ಞೆಗಳನ್ನು ಪ್ರಜೆಗಳ ಗಮನಕ್ಕೆ ತರಲು ಡಂಗುರ ಹೊಡೆಯಿಸಿ ತಿಳಿಸಬೇಕೆಂದೂ, ಅವುಗಳನ್ನು ನಾಲ್ಕು ದಾರಿಗಳು ಕೂಡುವ ಸ್ಥಳಗಳಲ್ಲಿ ಬರೆಯಿಸಿ ಪ್ರಕಟಿಸಬೇಕೆಂದೂ ಅವುಗಳನ್ನು ಮೀರಿದವರಿಗೆ ಶಿಕ್ಷೆಯನ್ನು ವಿಧಿಸಲಾಗುವುದೆಂದು ತಿಳಿಸಬೇಕೆಂದೂ ಶುಕ್ರನೀತಿಸಾರ ತಿಳಿಸುತ್ತದೆ. "ದೂತರ ಮೂಲಕ ರಾಜರು ತಮ್ಮ ಪ್ರಜೆಗಳಿಗೆ ಈ ರೀತಿಯಾಗಿ ತಮ್ಮ ಆಜ್ಞೆಗಳನ್ನು ಪಾಲಿಸಬೇಕೆಂದು ಹೇಳಿಕಳುಹಿಸಬಹುದು, ದೂತರು ಅವಜ್ಞೆಯಿಂದಲೋ, ಅಜ್ಞಾನದಿಂದಲೋ, ದಡ್ಡತನದಿಂದಲೋ ಆಜ್ಞೆಗಳನ್ನು ಸರಿಯಾಗಿ ಮುಟ್ಟಿಸಲು ತಪ್ಪುಮಾಡಬಹುದು, ಆದ್ದರಿಂದ ತಾಳೆಪತ್ರದ ಮೇಲೆ ಲಿಖಿತವಾದ ರಾಜಾಜ್ಞೆಯೇ ಗೌರವಾರ್ಥವಾದುದು"ಎಂದು ಅರ್ಥಶಾಸ್ತ್ರ ಹೇಳುತ್ತದೆ.

ಕೆಲವು ಸಲ ಲಿಖಿತ ಶಾಸನದ ಮೂಲಕ ರಾಜಾಜ್ಞೆಯನ್ನು ಕಳುಹಿಸಿದರೂ ದೂತರ ಅವಜ್ಞೆಯಿಂದ ಎಂಥ ಅನಾಹುತ ಸಂಭವಿಸಬಹುದು ಎಂಬುದಕ್ಕೆ ವಡ್ಡಾರಾಧನೆಯಲ್ಲಿ ಬರುವ ಭದ್ರಬಾಹುಭಟ್ಟಾರಕರ ಕತೆಯಲ್ಲಿ ಕುಣಾಲನಿಗೆ ಕಣ್ಣುಹೋಗುವಂತಾದ ಸಂದರ್ಭವನ್ನು ಇಲ್ಲಿ ನೆನೆಯಬಹುದು.[1] "ರಾಜರ ಆಜ್ಞೆಯೇನೋ ತಾಳೆಪತ್ರಗಳ ಮೇಲೆ ಇದ್ದಿರಬಹುದು ಆದರೆ ಅವು ಇಲ್ಲಿಯವರೆಗೆ ಉಳಿದು ಬಂದಿಲ್ಲ, ಅವರು ಕೊಟ್ಟ ದತ್ತಿಗಳ ವಿಷಯ ಮೂಲತ: ತಾಳೆಪತ್ರಗಳ ಮೇಲೆ ಇದ್ದಿತಾದರೂ ಆ ವಿಷಯವು ಬಹುಕಾಲ ಉಳಿಯಲೆಂಬ ಉದ್ದೇಶದಿಂದ ತಾಮ್ರಪಟಗಳ ಮೇಲೂ, ಶಿಲೆಗಳಮೇಲೂ ಕೊರೆದರು, ಇವುಕೂಡ ರಾಜಾಜ್ಞೆಗಳಾದುದರಿಂದ ಶಾಸನವೆಂಬುದು ಇವುಗಳಿಗೂ ಕ್ರಮೇಣ ಅನ್ವಯವಾಯಿತು.[2] ಆದರೆ ಮುಂದೆ ಬರುಬರುತ್ತಾ ರಾಜರಲ್ಲದೆ ಉಳಿದವರೂ ದತ್ತಿಯನ್ನು ಬಿಟ್ಟುಕೊಟ್ಟ ವಿಷಯವನ್ನು ಹೇಳುವ ಬರಹಗಳಿಗೂ ಅಥವಾ ಯಾವ ದತ್ತಿಯ ವಿಷಯವನ್ನು ಹೇಳದೆ ಸಲ್ಲೇಖನಾದಿ ವಿಷಯಗಳನ್ನು ನಿರೂಪಿಸುವ ಬರಹಗಳಿಗೂ ಶಾಸನಗಳೆಂಬ ಹೆಸರು ರೂಢಿಗೆ ಬಂದಂತೆ ಊಹಿಸಬಹುದು". ಯಾಜ್ಞವಲ್ಕ್ಯ ಸಂಹಿತೆಯಲ್ಲಿ ರಾಜನ ಕರ್ತವ್ಯಗಳನ್ನು ಹೇಳುವಾಗ ಈ ಮಾತುಗಳು ಬರುತ್ತವೆ.[3]

ಭೂಮಿಯನ್ನು ದಾನಮಾಡುವಾಗಲೋ ಅಥವಾ ಯಾವುದಾದರೂ ಶಾಶ್ವತವಾದ ಏರ್ಪಾಟನ್ನು ಮಾಡುವಾಗಲೋ ಅದರ ನಿಯಮಗಳನ್ನು ಮುಂದಿನ ರಾಜರ ತಿಳುವಳಿಕೆಗಾಗಿ ವಸ್ತ್ರಪಟದ ಮೇಲಾಗಲೀ, ತಾಮ್ರಪಟದ ಮೇಲಾಗಲೀ ಬರೆಯಿಸಬೇಕು, ಅದರಲ್ಲಿ ತನಗಿಂತ ಹಿಂದಿನ (ಮೂರು) ತಲೆಮಾರುಗಳ ವಿಷಯ ತನ್ನ ವಿಷಯ ದಾನವನ್ನು ಸ್ವೀಕರಿಸುವವನ ವಿಷಯ, ದಾನದ ಪ್ರಮಾಣ, ಭೂಮಿಯ ಮೇರೆಗಳು, ದಿನಾಂಕ ಇವುಗಳನ್ನು ನಿರೂಪಿಸಿ ತನ್ನ ಮುದ್ರೆ ಮತ್ತು ಸಹಿಗಳನ್ನು ಹಾಕಬೇಕು, ಹೀಗೆ ದಾನವು ಶಾಶ್ವತವಾಗಿ ನೆಲೆಸುವಂತೆ ಮಾಡಬೇಕು.

ಹೀಗೆ ಶಾಸನಗಳು ಮೊದಲು ರಾಜಾಜ್ಞೆಗಳು ಮಾತ್ರ ಆಗಿದ್ದವು ಹಾಗೆಯೇ ಕಾನೂನುಗಳನ್ನು ಜನರಿಗೆ ಪ್ರಕಟಪಡಿಸುವ ಬರಹಗಳೇ ಶಾಸನಗಳು. ರಾಜನೇ ಆಗಲೀ ಅಥವಾ ಬೇರೆಯಾರೇ ಆಗಲಿ ಅವರು ದಾನವನ್ನು ಕೊಟ್ಟಾಗ ಆ ದಾನದ ವಿಷಯದಲ್ಲಿ ಕೆಲವು ನಿಯಮಗಳನ್ನು ಹಾಕಿ ಆ ನಿಯಮಗಳನ್ನು ಯಾರು ಉಲ್ಲಂಘಿಸಕೂಡದೆಂದೂ ಎಲ್ಲರೂ ಆ ಶಾಸನವನ್ನು ಕಾಪಾಡಿಕೊಂಡು ಬರಬೇಕೆಂದೂ ಆಜ್ಞೆ ಮಾಡುತ್ತಿದ್ದರು, ಅಲ್ಲದೆ. ದಾನವಾಗಿ ಕೊಟ್ಟ ಭೂಮಿಗೆ ತೆರಿಗೆಗಳನ್ನು ತೆಗೆದುಹಾಕಿದ ಆಜ್ಞೆಗಳನ್ನು ರಾಜನೋ ಅಥವಾ ಅವನ ಅಧಿಕಾರಿಗಳೋ ಹೊರಡಿಸುತ್ತಿದ್ದರು, ಹೀಗೆ ಪರ್ಯಾಯವಾಗಿ ಇಂತಹ ಇತರ ಬರಹಗಳಿಗೂ ಕೂಡ ಶಾಸನಗಳೆಂಬ ಹೆಸರು ಮುಂದೆ ರೂಢಿಗೆ ಬಂದಿತು, ಈ ಅರ್ಥವು ಇನ್ನು ವಿಸ್ತಾರವಾಗಿ ರಾಜರ ಪ್ರಶಸ್ತಿಯನ್ನು ಹೇಳುವ, ವೀರತ್ವವನ್ನು ಹೇಳುವ ಸನ್ಯಾಸಿಗಳ ಮರಣವನ್ನು ಹೇಳುವ ಕೊನೆಗೆ ಶಿಲ್ಪದ ಅಥವಾ ಶಿಲ್ಪಿಯ ಹೆಸರನ್ನು ಹೇಳುವ ಬರಹಗಳಲ್ಲಿ ಶಾಸನ ಎಂಬ ಹೆಸರು ಅನ್ವಯವಾಯಿತು. ಅಲ್ಲದೆ ಶಾಸನಗಳನ್ನು ಕಲ್ಲಿನ ಮೇಲೆ, ಲೋಹದ ಮೇಲೆ ಬರೆಯುವ ರೂಢಿಯಿದ್ದರೂ ಮರದ ಮೇಲೆ, ಮೂಳೆಗಳ ಮೇಲೆ, ಸುಟ್ಟ ಇಟ್ಟಿಗೆಗಳ ಮೇಲೆ, ಮಣ್ಣಿನ ಮೇಲೆ, ಮಡಿಕೆಗಳ ಮೇಲೆ ಬರೆದಿರುವ ಬರಹಗಳು ಕ್ರಮವಾಗಿ ಈಜಿಪ್ಟ್, ಚೀನ, ಮೆಸಪೊಟೋಮಿಯ, ಹರಪ್ಪ ಮೊಹೆಂಜದಾರೋ, ಮುಂತಾದ ಕಡೆಗಳಲ್ಲಿ ಸಿಕ್ಕಿವೆ, ಆದರೆ ಭಾರತದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಕಲ್ಲಿನ ಮೇಲೆ, ಸ್ತಂಭಗಳ ಮೇಲೆ ದೇವಾಲಯಗಳ ಗೋಡೆಗಳ ಮೇಲೆ, ವಿಗ್ರಹದ ಪೀಠಗಳ ಮೇಲೆ, ತಾಮ್ರಪಟಗಳ ಮೇಲೆ, ಪಾತ್ರೆಗಳಮೇಲೆ ಮಡಿಕೆಗಳ ಮೇಲೆ ಶಾಸನಗಳು ದೊರಕಿವೆ,

ಈ ಮೇಲಿನ ಎಲ್ಲಾ ವಿವರಣೆಯನ್ನು ನೋಡಿದಾಗ ರಾಜರು ಅಥವಾ ಅವರ ಅಧಿಕಾರಿಗಳು ಹೊರಡಿಸಿದ ಆಜ್ಞೆಗಳನ್ನು ಹಾಕಲು ಕಲಿತ ಮೇಲೆ ಅಥವಾ ಇತರ ಮಾಧ್ಯಮಗಳ ಮೇಲೆ ಸ್ಥಾಪಿಸಲು ಯಾರಾದರೂ ಲಿಪಿಬಲ್ಲವರನ್ನು ಕರೆದು ಇದಕ್ಕಾಗಿಯೆ ನೇಮಿಸಲ್ಪಟ್ಟವರೂ ಇರಬಹುದು ಅವರಿಗೆ ಆಜ್ಞೆಯ ವಿಷಯವನ್ನು ಕೊಟ್ಟು ಅದರ ಲಿಪಿಯನ್ನು ಬರೆದು ಕೊಡಲು ಹೇಳುತ್ತಿದ್ದರು. ಆಗ ಆತ ಆ ಶಾಸನದ ಮೂಲ ಉದ್ದೇಶದ ವಿಷಯದ ಸಾರಸಂಗ್ರಹ ತಿಳಿದು ಬರೀ ಅಷ್ಟನ್ನೇ ನಿರೂಪಿಸದೆ ಆತ ಅದರ ಹಿಂದೆ–ಮುಂದೆ, ಮಧ್ಯೆ, ಸುತ್ತಮುತ್ತ ತನ್ನ ಪ್ರತಿಭೆಯ ಪ್ರಕರ್ಷತೆಯಿಂದ ಆ ವಿಷಯಕ್ಕೆ ಹೊಂದುವಂಥ(ಹೊಂದದೆಯೂ ಇರಬಹುದಾದ)ಒಂದು

ವಿಸ್ತಾರವಾದ ಚೌಕಟ್ಟನ್ನು ನಿರ್ಮಿಸಿಕೊಂಡು ಆಚೌಕಟ್ಟಿನ ಮಧ್ಯೆ ಶಾಸನದ ನಿಜವಾದ ಸಂಗತಿಯನ್ನು ಪ್ರಸ್ತಾಪಮಾಡುತ್ತಿದ್ದ ಆ ಸಮಯದಲ್ಲಿ ಶಾಸನದ ಲೇಖಕ ಅಥವಾ ಕವಿಗಳು ಆ ಚೌಕಟ್ಟಿನಲ್ಲಿ ಶಾಸನದ ನೆಪದಲ್ಲಿ ಅನೇಕ ರೀತಿಯ ವರ್ಣನೆಗಳನ್ನು ತಂದಿದ್ದಾರೆ. ಈ ವರ್ಣನೆಗಳನ್ನು ಶಾಸನಕ್ಕೆ ಹೊರತಾಗಿ ಕೇವಲ ಪ್ರಾಸಂಗಿಕವಾಗಿದ್ದರೂ ಅದರಲ್ಲಿ ಸಾಹಿತ್ಯಾಂಶಗಳು ತುಂಬಾ ಸುಂದರವಾದ ಕಾವ್ಯಗಳಂತೆ ಶಾಸನಗಳು ರಚಿತವಾಗಿರುವುದನ್ನು ಕಾಣಬಹುದು. ಉದಾಹರಣೆಗೆ ಬೊಪ್ಪಣನ ಗೊಮ್ಮಟಸ್ತುತಿ ಶಿರಸಂಗಿ ಹಬ್ಬಯ್ಯನಾಯಕನ ಶಾಸನ. ಈ ರೀತಿಯ ಕೆಲವು ಕಾವ್ಯಗಳು ಅಥವಾ ಕಾವ್ಯ ಖಂಡಗಳು ಶಾಸನ ಪ್ರಪಂಚದಲ್ಲಿ ಅಪರೂಪ, ಮೇಲಿನ ಈ ಎರಡು ಶಾಸನಗಳ ಕರ್ತೃಗಳು ಒಳ್ಳೆಯ ಕವಿಗಳಾಗಿದ್ದು ಇವನ್ನು ಬಿಟ್ಟರೆ ಉಳಿದೆಲ್ಲಿಯೂ ಅದರ ಕೃತಿಗಳು ಸಿಗದೆ, ಏಕೈಕ ಕೃತಿಗಳಾಗಿ ಸಿಕ್ಕಿರುವುದು ದುರದೃಷ್ಟಕರ ಸಂಗತಿ, ಶಾಸನದ ಕವಿಗಳು ಕಾವ್ಯಮಯವಾದ ಭಾಷೆ, ಸುಂದರವಾದ ಶೈಲಿ, ಅದಕ್ಕೊಪ್ಪುವ ಛಂದೋಮಾಧ್ಯಮಗಳಿಂದ ಆ ನಾಡಿನವರ್ಣನೆ, ಪ್ರಕೃತಿಯ ವರ್ಣನೆ, ರಾಜನ ವರ್ಣನೆ, ಆತನಪರಾಕ್ರಮದ ವರ್ಣನೆಗಳನ್ನು, ಸ್ತ್ರೀಯಾದರೆ ಆಕೆಯ ಗುಣವಿಶೇಷಗಳನ್ನು ಸುಂದರವಾಗಿ ಚಿತ್ರಿಸಿರುವುದನ್ನು ಮುಂದೆ ವಿವರಿಸಲಾಗುವುದು ಈ ರೀತಿಯ ಅನೇಕ ವರ್ಣನೆಗಳ ಮಧ್ಯೆ ಶಾಸನದ ನಿಜವಾದ ಮತ್ತು ಅದರ ಉದ್ದೇಶದ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ,

ರಾಜ ಅಥವಾ ಯಾರೇ ಶಾಸನ ಹಾಕಿಸಲಿ ಅವರು ಹೀಗೆ ಕಾವ್ಯಮಯವಾದ ಭಾಷೆ ಮತ್ತು ಸುಂದರವಾದ ಶೈಲಿಯಿಂದ ರಚಿಸಬೇಕೆಂಬುದಾಗಿ ಅವರು ಹೇಳುತ್ತಿರಲಿಲ್ಲ. ಆದರೆ ಕವಿಗಳು ತಮ್ಮ ಪ್ರತಿಭಾಶಕ್ತಿ ಪಾಂಡಿತ್ಯ ಬಲ ಮತ್ತು ಅನುಭವಗಳ ಅನಂತವಾದ ಶಕ್ತಿಯಿಂದ ಈರೀತಿಯ ಸುಂದರವಾದ ಸಾಹಿತ್ಯ ರಚಿತವಾಗುತ್ತಿತ್ತು ಇದಕ್ಕೆ ಶಾಸನ ಹಾಕಿಸಿದವರ ಅಡ್ಡಿಯೇನೂ ಇಲ್ಲದೆ ಅವರಿಂದ ಮತ್ತಷ್ಟು ಪುರಸ್ಕಾರ ಸಿಗುತ್ತಿರಬೇಕು,

ಆದರೆ ಈ ರೀತಿಯಾಗಿ ರಚಿತವಾದ ಶಾಸನಗಳಲ್ಲಿ ಕೆಲವು ವೇಳೆ ಕವಿಗಳು ಅನುಭವದ ಒತ್ತಡವಿಲ್ಲದೆ. ಕೇವಲ ಪಾಂಡಿತ್ಯ ಮತ್ತು ಸಂಪ್ರದಾಯಗಳಿಗೆ ಕಟ್ಟುಬಿದ್ದು ಅತಿಶಯ ಮತ್ತು ನಿರನುಭವ ನೀರಸದಿಂದ ಕೂಡಿದ ಸಂಗತಿಗಳನ್ನು ಬರೀ ಶಬ್ದಗಳಿಂದ ತುಂಬಿರುವುದಕ್ಕೂ ಉದಾಹರಣೆಗಳನ್ನು ಕೊಡಬಹುದು, ಆದರೆ ಈ ರೀತಿಯವು ತೀರಾ ಕಡಿಮೆಯೆಂದು ಹೇಳಬಹುದು, ಅಲ್ಲದೆ ಈ ರೀತಿಯ ದೋಷಗಳಿಗಿಂತ ಗುಣಗಳಿಂದ ತುಂಬಿದ ಶಾಸನ ಸಾಹಿತ್ಯವೆ ಹೆಚ್ಚೆಂದು ಶಾಸನಾಭ್ಯಾಸಿಗಳಿಗೆ ಬೇರೆ ಹೇಳಬೇಕಾಗಿಲ್ಲ. ಕೆಲವು ಚಿಕ್ಕ ಚಿಕ್ಕ ಭಾವಗೀತೆಗಳಂತಿದ್ದರೆ ಮತ್ತೆ ಕೆಲವು ಮೇಲೆ ಹೇಳಿದಂತೆ ಇಡಿಯಾದ ಕಾವ್ಯಗಳಂತೆಯೂ ಕಾವ್ಯ ಖಂಡಗಳಂತೆಯೂ ಇವೆ ಎಂಬುದನ್ನು ಗಮನಿಸಬೇಕು ಆದರೆ ಇಲ್ಲಿ ನಾವು ಗಮನಿಸಬೇಕಾದ ಒಂದು ಗಮನಾರ್ಹವಾದ ಸಂಗತಿಯೆಂದರೆ ಶಾಸನಗಳಲ್ಲಿ ಬರುವ ಮೇಲೆ ಹೇಳಿದ ರೀತಿಯ ವರ್ಣನೆಗಳನ್ನು ಶಾಸನದ ವಿಷಯಕ್ಕೆ ನೇರವಾಗಿ ಸಂಬಂಧಿಸದಿದ್ದರೂ ಕೂಡ ಅವು ಶಾಸನದ ಒಂದು ಭಾಗವಾಗಿ, ಅಂಶವಾಗಿ

ಬರುತ್ತವೆ ಮತ್ತು ನೀರಸವಾಗದಂತೆ ಒಂದು ರೀತಿಯ ಬೋರಾಗಬಹುದಾದ ಐತಿಹಾಸಿಕ ಸಂಗತಿಗಳನ್ನು ಬಹಳ ಚನ್ನಾಗಿ ಮನದಟ್ಟಾಗುವಂತೆ ಚಿತ್ರಿಸುತ್ತವೆ. ಆದರೆ ಕೆಲವುಕಡೆ ಈ ವರ್ಣನೆಗಳ ವೈಪರೀತ್ಯದಿಂದಾಗಿ ಅವು ಸೊಗಸಾದ ಸಾಹಿತ್ಯಗುಣಗಳಿಂದ ಕೂಡಿದ್ದು ಶಾಸನದ ಮುಖ್ಯ ವಿಷಯವನ್ನೇ ಮರೆಯಿಸುವಂತಹ ರೀತಿಯ ಸೊಗಸಾಗಿ ಚಿತ್ರಿತವಾಗಿರುವುದುಂಟು ಎಂಬುದಕ್ಕೆ ಉದಾಹರಣೆಗಾಗಿ ಶಿರಸಂಗಿಯ ಹಬ್ಬಯ್ಯನಾಯಕನ ಶಾಸನವನ್ನು ಕೊಡಬಹುದು.

ಶಾಸನಗಳು ಬಹಳಷ್ಟು ಪ್ರೌಢವಾದ ಚಂಪೂ ಸಂಪ್ರದಾಯದಿಂದ ಕೂಡಿದವುಗಳಾಗಿವೆ, ಗದ್ಯ ಶಾಸನಗಳು ಅದರಲ್ಲಿಯೂ ಸಾಹಿತ್ಯದ ದೃಷ್ಟಿಯಿಂದ ಗಮನಾರ್ಹವಾದ ಗದ್ಯಶಾಸನಗಳು ತ್ರಿಪದಿಗಳ ಪದ್ಯಶಾಸನಗಳೇ ಹೆಚ್ಚು ಇದಕ್ಕೆ ಕಾರಣ. ಹಿಂದೆ ಇದ್ದ ಮನೋಧರ್ಮಗಳು, ಶಿಷ್ಟಚಾರದ ಗೊಡ್ಡುಸಂಪ್ರದಾಯಕ್ಕೆ ಕಟ್ಟುಬಿದ್ದ ಪಂಡಿತರಂತಹ ಆಚರ್ಯ ಸಂಸ್ಕೃತ ಕವಿಗಳ ಪ್ರಭಾವ.

ಈ ರೀತಿಯ ಕಾರಣಗಳಿಂದಾಗಿ ಪ್ರೌಢವಾದ ಸಂಸ್ಕೃತಮಯವಾದ ಪದ್ಯಶೈಲಿಯಿಂದಲೇ ಅವು ರಚಿತವಾದರೂ ಸಾಹಿತ್ಯದ ದೃಷ್ಟಿಯಿಂದ ಬಹಳ ಹೃದಯಂಗಮವಾಗಿದೆ. ಆದ್ದರಿಂದ ಯಾವುದೇ ಹಿಂದಿನ ಸಾಹಿತ್ಯದಲ್ಲಿ ನಿಚ್ಚಳವಾದ ಎರಡು ಮಾರ್ಗಗಳನ್ನು ಗುರುತಿಸಬಹುದು (1) ಪಂಡಿತಪ್ರಿಯ ಪ್ರೌಢಮಾರ್ಗ (2) ಪಾಮರಗ್ರಾಹ್ಯ ಸರಳ ಸಂಪ್ರದಾಯ ಶಾಸನಗಳೂ ಇದಕ್ಕೆ ಹೊರತಾಗಿಲ್ಲ.

ಕೇವಲ ರಾಜಕೀಯ ಮತ್ತು ಸಾಂಸ್ಕೃತಿಕ ದೃಷ್ಟಿ–ಅಂಶ–ಗಳಿಂದ ಕೂಡಿದ ಕೆಲವು ಶಾಸನಗಳನ್ನು ಬಿಟ್ಟರೆ ಉಳಿದ ಬಹುಮಟ್ಟದ ಶಾಸನಗಳ ಗದ್ಯ–ಪದ್ಯಭಾಗಗಳು ಪ್ರಶಂಶನೀಯವಾದ ಸಾಹಿತ್ಯಗುಣಗಳಿಂದ ಕೂಡಿದ್ದು ಮನೋಹರವಾಗಿರುವುದೆಂದು ಹೇಳಬಹುದು, ಪಂಪ, ರನ್ನ, ಜನ್ನ, ಮೊದಲಾದ ಉದ್ದಾಮ ಕವಿಗಳಲ್ಲಿ ಕಂಡುಬರುವ ಪ್ರೌಢವಾದ ಶೈಲಿ ಉಪಮೇ, ರೂಪಕ, ಉತ್ಪ್ರೇಕ್ಷೆ, ಶ್ಲೇಷ ಮುಂತಾದ ಅಲಂಕಾರಗಳಿಂದ ಕೂಡಿ ಮೇಲೆ ಹೇಳಿದಂತೆ, ಸುಂದರವಾದ ವರ್ಣನೆ ಭವ್ಯವಾದ ಕಲ್ಪನಾ ವಿನ್ಯಾಸ ಹೃದಯವಾದ ಭಾವಸೌಂದರ್ಯ ಮುಂತಾದವುಗಳಿಂದ ತುಂಬಿವೆ. ಸಾಮಾನ್ಯವಾಗಿ ಪ್ರತಿಯೊಂದು ಶಾಸನದಲ್ಲಿ ವೀರರ ಪ್ರತಾಪ, ಸ್ಥಾವಾಚಾರ್ಯರ ಪ್ರಭಾವ, ದೇವಾಲಯಗಳ ಘನತೆ, ದತ್ತಿಗಳ ವಿವರ, ರಾಜರ ವಂಶಗಳ ವಿವರ ಇತ್ಯಾದಿ ವಿಷಯ ವರ್ಣನೆಗಳಿಂದ ಕೂಡಿದ್ದರೂ ಒಂದೊಂದರಲ್ಲಿಯೂ ಒಂದಿಲ್ಲೊಂದು ದೃಷ್ಟಿಯಿಂದ ಸಾಹಿತ್ಯಾಂಶವಿರುವುದನ್ನು ಗುರುತಿಸಿ ಗಮನಿಸಬಹುದು.

ಶಾಸನಗಳನ್ನು ಬರೆಯುವ ನೆಪದಿಂದ ಕೆಲವರು ಸ್ಥಳಪುರಾಣವನ್ನು ಕೆಲವರು ಕತೆ, ಕೆಲವರು ಸುಭಾಷಿತಗಳನ್ನು, ಕೆಲವರು ಪೌರಾಣಿಕ ಸಂಗತಿಗಳನ್ನು, ಕೆಲವರು ಸ್ವಭಾವ ಚಿತ್ರಗಳನ್ನು ಚಿತ್ರಿಸಿದ್ದರೆ, ಮತ್ತೆ ಕೆಲವರು ಒಳ್ಳೆಗುಣಗಳನ್ನು ಮೇಲೆತ್ತಿದ್ದಾರೆ. ಅವಗುಣಗಳನ್ನು ವಿಡಂಬಿಸಿದ್ದಾರೆ. ಒಟ್ಟಿನಲ್ಲಿ ನಮ್ಮ ಶಾಸನ ಸಾಹಿತ್ಯ ಪ್ರಪಂಚದಲ್ಲಿ ನೂರಾರು ಕಿರುಹಬ್ಬಗಳು ಚುಟುಕಗಳು ರಸಗಳಿಂದ ಹೃದಯವನ್ನು ಅರ್ಥಗಳಿಂದ, ಬುದ್ಧಿಯನ್ನು ತಣಿಸುತ್ತವೆ, ಅರಳಿಸುತ್ತವೆ, “ಶಾಸನಗಳು ಕನ್ನಡ ಸಾಹಿತ್ಯದ

ತಲಕಾವೇರಿ'' ಕನ್ನಡ ಕಾವ್ಯದ ಜಿನುಗು, ಮೊಟ್ಟಮೊದಲು ಕಂಡುಬರುವುದು ಶಾಸನಗಳಲ್ಲಿ ಪಂಪನ ಕಾವ್ಯಗಳಿಗಿಂತ ಹಿಂದಿನ ಕಾವ್ಯವಾಗಲೀ ನೃಪತುಂಗಾನುಮತದಂತೆ ರಚಿತವಾದ ಕವಿರಾಜಮಾರ್ಗಕ್ಕಿಂತ ಹಿಂದಿನ ಗ್ರಂಥವಾಗಲೀ ನಮಗೆ ದೊರೆತಿಲ್ಲ. ಕವಿರಾಜಮಾರ್ಗದಲ್ಲಿ ಹೇಳಿರುವ ವಿಮಲೋದಯ ನಾಗಾರ್ಜುನ ಮುಂತಾದವರು ಬಹುಶ 7–8ನೇ ಶತಮಾನಕ್ಕಿಂತ ಹಿಂದೆಹೋಗಲಾರರು ಎಂದು ತಿಳಿಯುತ್ತದೆ, ಆದರೆ ಪಂಪನಿಗಿಂತ ಹಿಂದಿನ ಒಂದನೆಯ ಗುಣವರ್ಮನ ಕೆಲವು ಪದ್ಯಗಳು ದೊರೆಯುತ್ತವೆ''.[4] ಅವನ ಎಲ್ಲಾ ಕಾವ್ಯಗಳು ಸಿಕ್ಕಿಲ್ಲ. ''ಕವಿರಾಜಮಾರ್ಗದ ಇನ್ನಿತರ ಉಲ್ಲೇಖಗಳೂ ಕೂಡ ಕ್ರಿ.ಶ. 850ಕ್ಕಿಂತ ಹಿಂದಿನ ಕನ್ನಡದಲ್ಲಿ ಸಾಹಿತ್ಯ ವಿದ್ದಿತೆಂಬುದಕ್ಕೆ ಆಧಾರಗಳೇ ಹೊರತು ಎಷ್ಟು ಹಿಂದೆ ಎಂಬುದಕ್ಕೆ ಅಲ್ಲಿಂದ ಏನೂ ಸಹಾಯವಾಗುವುದಿಲ್ಲ, ಆದ್ದರಿಂದ ಕ್ರಿ.ಶ 850ಕ್ಕಿಂತ ಹಿಂದಿನ ಸಾಹಿತ್ಯದ ಪ್ರಾಚೀನತೆಯ ಬಗ್ಗೆ ವಿಚಾರ ರೂಢಬಯಸುವವರು ಪದ್ಯಕ್ಕೆ ಅನಿವಾರ್ಯವಾಗಿ ಶಾಸನ ಸಾಹಿತ್ಯವನ್ನೇ ಅವಲಂಬಿಸಬೇಕಾಗಿದೆ.[5]

ಸುಮಾರು ಕ್ರಿ.ಶ 700ಕ್ಕಿಂತ ಹಿಂದೆ ಕರ್ನಾಟಕದ ಕಾವ್ಯಮಯ ಶಾಸನಗಳೆಲ್ಲವೂ ಬಹುಮಟ್ಟಿಗೆ ಸಂಸ್ಕೃತದಲ್ಲಿವೆ ಎಂಬುದನ್ನು ಈಗಾಗಲೇ ತಿಳಿದಿದ್ದೇವೆ. ತಾಳಗುಂದ ಶಾಸನದ ಕರ್ತೃ ಸುಮಾರು ಕ್ರಿ.ಶ 450ರ ಕುಬ್ಜ, ಕ್ರಿ.ಶ 630ರ ಐಹೊಳೆ ಶಾಸನದ (ಪುಲಕೇಶಿಯ–ಮಂಗಳೇಶ ಶಾಸನ)ಕರ್ತೃ ರವಿಕೀರ್ತಿ ಕ್ರಿ.ಶ ಸುಮಾರು.602ರ ಮಹಾಕೂಟ ಶಾಸನ( ಮಂಗಳೇಶನದು)ದ ಅಜ್ಞಾತ ಕವಿ–[ಬಹುಶ ಅದೇ ರವಿಕೀರ್ತಿ] ಇವರು ಕೆಲವು ಸುಪ್ರಸಿದ್ಧ ಕವಿಗಳು ಈ ಶಾಸನಗಳೆಲ್ಲ ಸಂಸ್ಕೃತದಲ್ಲಿವೆ. ಅಲ್ಲದೆ ಕದಂಬರ ಗಂಗರ ತಾಮ್ರಪಟಗಳೆಲ್ಲವೂ ಸಂಸ್ಕೃತದಲ್ಲಿದ್ದು ಕೊನೆಯಲ್ಲಿ ಒಮ್ಮೊಮ್ಮೆ ಗಡಿಗಳನ್ನು ಹೇಳುವಾಗ ಕನ್ನಡ ಭಾಷೆ ಗೋಚರವಾಗುತ್ತದೆ. ಕನ್ನಡದಲ್ಲಿಯೇ ರಚಿತವಾದ ಶಿಲಾಶಾಸನಗಳು ಸಂಕ್ಷಿಪ್ತವಾಗಿದ್ದು ಕೇವಲ ವಿಷಯ ನಿರೂಪಣೆಮಾಡಿ ಅಲ್ಲಿಗೆ ನಿಂತುಬಿಡುವ ಗದ್ಯಗಳನ್ನು ಒಳಗೊಂಡಿವೆ. ಈ ಗದ್ಯಗಳಲ್ಲಿ ಹೇಳಿಕೊಳ್ಳುವಂತ ಸಾಹಿತ್ಯ ಗುಣಗಳೇನೂ ಕಾಣುವುದಿಲ್ಲ. ಈ ರೀತಿಯ ಕನ್ನಡ ಕವಿಗಳ ಸಂಸ್ಕೃತ ಶೈಲಿ ಆಗಿನ ಕಾಲದ ಸಂಸ್ಕೃತ ಕವಿಗಳಿಗೆ ಒಡ್ಡಿದ ಒಂದು ರೀತಿಯ ಸವಾಲಿನಂತಿವೆ ಅಷ್ಟೆ.

ಕ್ರಿ.ಶ 450ರ ಪ್ರಥಮ ಕನ್ನಡ ಶಿಲಾಶಾಸವಾದ ಹಲ್ಮಿಡಿ ಶಾಸನವು ಸಂಸ್ಕೃತ ಮತ್ತು ಕನ್ನಡಗಳ ಸರಿಬೆರಕೆಯಿಂದ ರಚಿತವಾಗಿದ್ದು ನೇರವಾದ ಗದ್ಯನಿರೂಪಣೆ ಇದೆ. ಇದನ್ನು ಗಮನಿಸಿದರೆ ಸಂಸ್ಕೃತದ ಪ್ರಭಾವಕ್ಕೆ ಒಳಗಾಗಿದ್ದ ಕವಿಗಳು ಕನ್ನಡವನ್ನು ಅದರ ಬಂಧನದಿಂದ ಬಿಡುಗಡೆದೂಡಲೆತ್ನಿಸುತ್ತಿದ್ದ ಒಂದು ರೀತಿಯ ಸಂಧಿ–ಪರ್ವಕಾಲ ಎಂದು ಹೇಳಬಹುದು. ಅದರಲ್ಲಿ ಎಣಿಸಿದಂತೆ 20 ಕನ್ನಡ ಪದಗಳಿವೆ ಆದರೆ 45ಕ್ಕೆ ಸೇರಿದ ತಾಳಗುಂದ ಶಾಸನದಲ್ಲಿ ಮತ್ತು 634ರ ಐಹೊಳೆ ಶಾಸನದಲ್ಲಿ ಕನ್ನಡದ ವೃತ್ತಗಳನ್ನು ಮತ್ತು ವಂಶಸ್ಥ, ಮಂದಾಕ್ರಾಂತ, ಇಂದ್ರವಜ್ರ ಮತ್ತು ಜನಪ್ರಿಯಗಳಿಸಿದ್ದ ಆರ್ಯಾಗೀತಿ ಅರ್ಥಾತ್ ಕಂದ: ಶಾರ್ದೂಲ ವಿಕ್ರೀಡಿತ, ಮತ್ತೇಭ ಸ್ರಗ್ಧರಾ, ಮಹಾಸ್ತಗ್ಧರಾ ವೃತ್ತಗಳು ಬಳಕೆಯಾಗಿರುವುದು ಗಮನಾರ್ಹವಾದ ಸಂಗತಿ.

ಆದರೆ ನಮಗೆ ಕನ್ನಡದಲ್ಲಿಯೇ ರಚಿತವಾದ ಬಿಡಿಪದ್ಯಗಳು ಶಾಸನಗಳಲ್ಲಿ ದೊರೆಯುವುದು. ಸುಮಾರು 700ರ ಸಮಯದಲ್ಲಿ ಚಿತ್ರದುರ್ಗ ಜಿಲ್ಲೆಯ ತಮಟಕಲ್ಲು ಶಾಸನದಲ್ಲಿ ಒಂದು ಸುಂದರ ಕನ್ನಡ ವೃತ್ತವಿದೆ ಇದು ಹದಿನೇಳನೇ ಅತ್ಯಷ್ಟವೃತ್ತ. ಅದರ ಪಾಠ ಹೀಗಿದೆ:

**ಬಿಣಮಣಿ ಅನ್ನುಭೋಗಿ ಬಿಣದುಳ್ಬಣಿ ವಿಲ್ಲನದೋಸ್**
**ರಣಮುಖದುಳ್ಳ. ಕೋಲ(ಂ)ಗೆರಿಯಕ್ಕುರ್ ಮನಿನ್ದಗುಣದ**
**ಪ್ರಣಯ ಜನಕ್ಕೆ ಕಾಮನಸಿತೋತ್ಸಲ ವರ್ಣನವನ್**
**ಗುಣಮಧುರಾಂಕ್ಕೆ ದಿವ್ಯ ಪುರುಪುನ್ಸುರುಷ, ಪ್ರದರಸ್.**[6]

ಇದರಲ್ಲಿ ಕಾಲದ ವಿವರವಿಲ್ಲದಿದ್ದರೂ ಅವರ ಭಾಷೆ ಲಿಪಿ ಮುಂತಾದವುಗಳ ಸಹಾಯದಿಂದ ಸುಮಾರು ಕ್ರಿ.ಶ.500 ಇರಬಹುದೆಂದು ವಿದ್ವಾಂಸರ ಮತ, ಇಲ್ಲಿಯ ಭಾಷೆ ಪೂರ್ವದ ಹಳಗನ್ನಡ ಇದನ್ನು ಬಿಟ್ಟರೆ ಶ್ರವಣಬೆಳಗೊಳದಲ್ಲಿಯ ಸುಮಾರು ಕ್ರಿ.ಶ 700ರ ಸರಿಸುಮಾರಿನಲ್ಲಿ ರಚಿತವಾದ ಬಿಡಿ ಪದ್ಯಗಳು ಮಹಾಸ್ರಗ್ಧರಾ, ಶಾರ್ದೂಲ ವಿಕ್ರೀಡಿತ, ಮತ್ತೇಭ ವಿಕ್ರೀಡಿ, ಉತ್ಪಲಮಾಲೆ, ಚಂಪಕಮಾಲೆ, ವಿಕ್ರೀಡಿತ ಇತ್ಯಾದಿ ವೃತ್ತಗಳನ್ನು ಹೊಂದಿದ್ದು ಒಳ್ಳೆಯ ಸಾಹಿತ್ಯವನ್ನು ಒಳಗೊಂಡಿವೆ.

ಇದೇ ಸುಮಾರಿನಲ್ಲಿ ರಚಿತವಾದ ಸುಂದರವಾದ ತ್ರಿಪದಿಗಳು ಬಾದಾಮಿ ಶಾಸನಗಳಲ್ಲಿ ದೊರೆಯುತ್ತವೆ, ಇವು ಕನ್ನಡ ಜನತೆಯ ಮನವನ್ನು ನಾನಾದೃಷ್ಟಿಗಳಿಂದ ಆಕರ್ಷಿಸಿವೆ. ಅದರಲ್ಲಿ ಕಪ್ಪೆಅರಭಟ್ಟನ ವರ್ಣನೆಯನ್ನು ಜಾನಪದ ಶೈಲಿಯಲ್ಲಿ ಸರಳ ಹಾಗೂ ಸುಲಭ ಭಾಷೆಯಲ್ಲಿ ಅತ್ಯಂತ ಚೆಲುವಾಗಿ ಚಿತ್ರಿಸಿರುವುದು ಗಮನಾರ್ಹ. ಕನ್ನಡ ತ್ರಿಪದಿಯ ಮೂಲರೂಪದೊಡನೆ ದೊರೆಯುವುದು. ಇಲ್ಲಿಯೇ ಇದರ ಬಂದು ತ್ರಿಪದಿಯನ್ನು ನೋಡಬಹುದು:

**ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ**
**ಭಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್**
**ಮಾಧವ ನೀತನ್ಪೆರನಲ್ಲಿ.**[7]

ಇಲ್ಲಿಯ ಭಾವ ಭಾಷೆ ವ್ಯಕ್ತಿಚಿತ್ರ ಪರಾಕ್ರಮದ ವರ್ಣನೆ ಮುಂತಾದವು ಸೊಗಸಾಗಿದ್ದು ಸಾಹಿತ್ಯವೇ ಮೈದುಂಬಿ ನಿಂತಿದೆ(ನಾನು ಪ್ರತಿಪದ್ಯದ ಸಂಪೂರ್ಣ ವಿವರಕ್ಕೆ ಹೋದರೆ ಅದರ ಮುಖ್ಯ ಸೊಗಸನ್ನು ಮಾತ್ರ ತೋರಿಸಿ ಮುಂದಿನದನ್ನು ಸಹೃದಯ ಆಸ್ವಾದನಾ ಶಕ್ತಿಗೇ ಬಿಟ್ಟು ಮುಂದುವರೆಯುತ್ತೇನೆ. ಬಾದಾಮಿ ಶಾಸನಗಳಲ್ಲಿ ಕಾವ್ಯಮಯವಾದ ಸಾಹಿತ್ಯ ಸೌಂದರ್ಯದಿಂದ ಕೋರಿದ ಪದ್ಯಗಳನ್ನು ಕಂಡರೂ ಕನ್ನಡ ಶಾಸನಗಳಲ್ಲಿ ಪದ್ಯಗಳನ್ನು (ಸ್ವತಂತ್ರ) ಸುಂದರವಾದ ಗದ್ಯವನ್ನು (ಸಾಹಿತ್ಯ ದೃಷ್ಟಿಯಿಂದ) ಕಾಣಲು ಸ್ವಲ್ಪಕಾಲ ಹಿಡಿಸಿದಂತೆ ಕಾಣುತ್ತದೆ. ಅಲ್ಲಿಗೆ ಇದೆಲ್ಲವನ್ನು ನೋಡಿದಾಗ ಕನ್ನಡದಲ್ಲಿ ಸ್ವತಂತ್ರವಾಗಿ ಪದ್ಯರಚನೆ ಮಾಡಹೊರಟದ್ದು ಸು.700ರ ನಂತರ ಎಂದು ಕಾಣುತ್ತದೆ. " ಈ ದೃಷ್ಟಿಯಿಂದ ನೋಡಿದರೆ ಕನ್ನಡ ಸಾಹಿತ್ಯದ ಇತಿಹಾಸವನ್ನು (ಲಿಖಿತಸಾಹಿತ್ಯ ) ಸುಮಾರು ಕ್ರಿ.ಶ. 650 ಕ್ಕಿಂತ ಹಿಂದಕ್ಕೆ

ತೆಗೆದುಕೊಂಡುಹೋಗಲು ಸಾಧ್ಯವಿಲ್ಲವೆಂದು ತೋರುತ್ತದೆ, ಹಾಗೇನಾದರೂ ಹುಟ್ಟಿದ್ದರೆ. ಕಾವ್ಯಮಯವಾದ ಗದ್ಯಪದ್ಯಗಳು ದೊರೆಯುತ್ತಿದ್ದವು ಅದರಿಂದ ಕವಿರಾಜಮಾರ್ಗದಲ್ಲಿ ಉಕ್ತವಾಗಿರುವ ಕವಿಗಳು ಏಳನೇಶತಮಾನಕ್ಕಿಂತ ಬಹುಶಃ ಹಿಂದೆ ಹೋಗಲಾರರು"[8] ಎಂಬ ಡಾ. ಚಿದಾನಂದ ಮೂರ್ತಿಯವರ ಮಾತನ್ನು ಗಮನಿಸಬೇಕು.

ಈ ಮೊದಲೇ ವಿವರಿಸಿದಂತೆ ಶಾಸನಗಳ ಉದ್ದೇಶ ಒಂದಾದರೂ ಅದರಲ್ಲಿ ಬರುವ ಸಾಹಿತ್ಯಾಂಶ ನಮಗೆ ಮತ್ತು ಅದರಲ್ಲಿಯ ಸಂಸ್ಕೃತಿಯ ವಿಷಯವೂ ಅಷ್ಟೇ ಮುಖ್ಯ ಆ ಸಂಸ್ಕೃತಿಯ ಸುಂದರವಾದ ಸಾಹಿತ್ಯವೂ ಅಷ್ಟೇ ಮುಖ್ಯ ಆ ಸಾಹಿತ್ಯದ ಸೊಬಗನ್ನು ಕೆಲವು ಉದಾಹರಣೆಗಳೊಂದಿಗೆ ಸವಿಯುವ ಪ್ರಯತ್ನ ಮಾಡಬಹುದು

ಶಾಸನದ ಕವಿಗಳು ತಮ್ಮ ಕಲ್ಪನಾವಿಲಾಸ ಅನುಭವ ಮತ್ತು ಪ್ರತಿಭೆಯ ಪ್ರದರ್ಶತೆಗಳಿಂದ ಒಂದು ವರ್ಣನೆಯನ್ನು ಕೊಡುವಾಗ ಆ ಚಿತ್ರವನ್ನು ನಮ್ಮ ಕಣ್ಣಮುಂದೆ ನಿಲ್ಲುವಂತೆ ಚಿತ್ರಿಸುವುದರಲ್ಲಿ ನಿಷ್ಣವಂತರಾಗಿದ್ದರು ಎಂಬುದನ್ನು ಕಾಣಬಹುದು

ಉದಾ: ಶಿಗ್ಗಾವಿ ತಾಲ್ಲೂಕು, ಧಾರವಾಡ ಜಿಲ್ಲೆ ಕಳಸದ ಒಂದು ಶಾಸನ ಕಾಲ ಸುಮಾರು ಕ್ರಿ.ಶ 930 ಈ ಶಾಸನದಲ್ಲಿ ಅಗ್ರಹಾರ. ಹುಲಿಗೆರೆಯ ವರ್ಣನೆ(ಕಾಡಿಯೂರು) ಅದರ ಕೊಂಡಲಿಕೆರೆ ಅಲ್ಲಿಯ ಜನ ಸೊಗಸಾಗಿ ವರ್ಣಿತರಾಗಿದ್ದಾರೆ ಊರ ಜನಸಾಮಾನ್ಯರ ಗುಣವಿಶೇಷಗಳನ್ನು ವರ್ಣಿಸುವುದು ಈ ಶಾಸನದ ಉದ್ದೇಶ ಆ ಊರಿನ ಪ್ರಖ್ಯಾತಿಯ ವರ್ಣನೆ ಹೀಗಿದೆ:

**ತಮಗಿ ಕವಲ್ದು ಕತ್ತಲಿಪ ಚೂತ ರುಜಂಗಳೊಳೊಂದಿ ಕಂಪಿನೋಳ್ನವದು**
**ರಸ್ತಂಗಳಂ ತಳೆದ ಪಣ್ಗೋಲೆ(ನೆ) ಯಂಗಿಳಿವಿಣ್ಣು ಚುಂಚುವಿಂ**
**ದಿಮಿದೊಡೆ ಸೋರೆ ಸೋನೆಯೊಳೆ ಪಾಂಗುಡಿ ಮಿಂದಸ್ ದಿಪ್ಪುರ್ಪೊಳ್ವನಿ**
**ನ್ದೆಯೆಯನ ಕಾಡಿಯೂರ ಲತೆ ವಳ್ಳಿಯುಮಲ್ಲಿಯ ನಾಗವಲ್ಲಿಯುಂ.[9]**

ಅದೇ ರೀತಿ ಸೊಗಲ: ಸವದತ್ತಿ ತಾಲ್ಲೂಕು ಬೆಳಗಾವಿ ಜಿಲ್ಲೆ ಕಾಲ ಸು 980, ಇಲ್ಲಿ ಸೋಲ ಕ್ಷೇತ್ರದ ವರ್ಣನೆಯಿದೆ ಈ ಶಾಸನದ ಉದ್ದೇಶ ತ್ರೇತಾಯುಗದ ಕೊನೆಯಲ್ಲಿ ರಾವಣನ ನೆಚ್ಚಿನವರಾದ 'ಮಾ ಸುಮಾಲಿ" ಎಂಬ ದೈತ್ಯರು ಇಲ್ಲಿ ದೇವರನ್ನು ಪ್ರತಿಷ್ಠಾಪಿಸಿದರೆಂದೂ ಸೋಲು(ಸೊಗಲ)30 ನ್ನು ದೇವರಿಗೆ ದತ್ತಿಕೊಟ್ಟರೆಂದೂ ಸ್ಥಳಪುರಾಣ ಹೇಳುವುದಾಗಿದೆ ಈ ಪದ್ಯ ಉತ್ಪಲಮಾಲೆಯಲ್ಲಿದೆ,

**ಪಂಕಜ ಪುಂಡದಿಂದೆನೆವ ನೆಯ್ದಿಲ ಪೊಗೊಳಂ ತಳಿರ್ತಮಾ**
**ವಿಂ ಕುಸುಮೋದಿತಂ ಕೂಸನು ಪಾದರಿ ನೇಯಿಲ ಕೋಕಬಾಳೆಯಂ**
**ಬಂಕದ ವೃಷ ಜಾತಿಗಳಿನಿಂಚರದಿಂ ಪುಗಲೆಂಬಾ ಕೋಕಿಳಾ**
**ಳಂ ಕೃತದಿಂದೆ ಸಾಲಬನ ಮೊಪ್ಪುವುರೀ ವಿಷಯಾಂತರಾಳದೊಳ.[10]**

ಅಂತೆಯೇ ಅಲ್ಲಿಯ ಆಶ್ರಯದ ವರ್ಣನೆಯ ಪದ್ಯಗಳು

ಹೃದಯಂಗಮ್ಯವಾಗಿವೆ.

ಶಿರಸಿಂಗಿ''ಸವದತ್ತಿ ತಾಲ್ಲೂಕು ಬೆಳಗಾವಿ ಜಿಲ್ಲೆ ಕಾಲ ಸು.1148 ಹಬ್ಬಯ್ಯನಾಯಕನ ಶಾಸನ ಕವಿ ಮಧುರ ಈ ಶಾಸನದ ವಿವರವನ್ನು ಮೊದಲೇ ವಿವರಿಸಿದೆ, ಇದು ಸ್ಥಳಪುರಾಣವನ್ನು ಹೇಳುವುದಾಗಿದೆ, ಇಲ್ಲಿ ಕುಂತಳ ದೇಶದ ಬೆಳ್ವಲದ ಚಿತ್ರವನ್ನು ಕವಿ ಸೊಗಸಾಗಿ ಚಿತ್ರಿಸಿದ್ದಾನೆ ಕವಿಯ ಕಲ್ಪನೆ, ಚಿತ್ತಕ ಶಕ್ತಿಯನ್ನು ಮೆಚ್ಚುವಂತಹದು ಅದರಲ್ಲಿ ಒಂದು ಹೀಗಿದೆ

**ಕಂದ: ವಿದೆಯೆಂಬ ಸತಿಯ ಕುನ್ತಳ**
**ಕಳಾಪದಂತೆಸೆದು ಕೋಷ್ಟರ್ ಕುಂತಳದೇಶ**
**ಕೈಳವಟ್ಟು ಚಿನ್ನ ಪೂವೆನೆ**
**ಬೆಳಗಿದುದೊಳ್ಳೆ ಲಿಮೆನಿನಿಪ್ಪ ಬೆಳ್ವೊಲದೇಶಂ.**[11]

ನಮ್ಮ ಶಾಸನ ಕವಿಗಳು ಆ ಕಾಲದ ಅನೇಕ ಸ್ತ್ರೀಯರ ಗುಣಸೌಂದರ್ಯಗಳನ್ನು ಕೊಂಡಾಡಿರುವ ರೀತಿ ಬಹಳ ಸೊಗಸಾಗಿದೆ. ಅವರು ಆ ಸ್ತ್ರೀಯರಿಗೆ ಕೊಟ್ಟಿರುವಂತೆ. ವಿಶೇಷಗಳು ಅವರ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಮೂರ್ತಿವೆತ್ತತೆ ಮಾಡುತ್ತವೆ, ನಾವು ಒಂದು ಸ್ತ್ರೀಯ ಗುಣಕ್ಕೊಂದು, ಸ್ತ್ರೀಯ ಸೌಂದರ್ಯಕ್ಕೊಂದು ಉದಾಹರಣೆಯನ್ನು ನೋಡಬಹುದು.

ಸ್ತ್ರೀಯ ಗುಣಕ್ಕೆ : ಶಿಗ್ಗಾವಿ: ಶಿಗ್ಗಾವಿ ತಾಲ್ಲೂಕು ಧಾರವಾಡ ಜಿಲ್ಲೆ ಕಾಲ ಸು 1055 ಇದರಲ್ಲಿ ಲಚ್ಚದೇವಿಯ ವರ್ಣನೆಯಿದೆ ಇವಳು ಬನವಾಸಿ 1200ಕ್ಕೆ ಅರಸನಾಗಿದ್ದ ಕದಂಬ ಅರಿಕೇಸರಿಯ ಅರ್ಧಾಂಗಿ ಇಲ್ಲಿ ಚಿಕ್ಕ ಚಿಕ್ಕ ಗುಣವಿಶೇಷಗಳಿಂದ ಆಕೆಯ ರೂಪ ಗುಣ ಸ್ವಭಾವಗಳನ್ನು ಕವಿ ಮನೋಹರವಾಗಿ ಚಿತ್ರಿಸಿದ್ದಾನೆ, ಅದು ಚಂಪಕಮಾಲಾ ವೃತ್ತದಲ್ಲಿದೆ:

**ವಿನಯದ ಮೇಲೆ ಧರ್ಮದ ತವಮ್ಮನೆ ಸತ್ಯದ ಜನ್ಮಭೂಮಿ ಮಾಂ**
**ತನದ ಗುಂತಿ ಚಾಗದ ಮಹಾನಿಧಿ ಫೆಂಪದ ರನ್ನರಾಗಿಸ**
**ಜ್ಜನಿಯ ರಮ್ಯ ಹರ್ಮ್ಯ ಮಮಿವಿಂಗೆ ದುವಟ್ಟುವಿದ್ದ ಮುಗ್ಧಸ**
**ಜ್ಜನನುತೆಯೆಂದು ಬಗ್ಗೆಪುದು ಲಚ್ಚ ದೇವಿಯ ನೀ ಜಗಜ್ಜನ**

ಸ್ತ್ರೀಯ ಸೌಂದರ್ಯಕ್ಕೆ ಹೊಯ್ಸಳ ಬಲ್ಲಾಳನ ದಂಡನಾಥ ಕುವರ ಲಕ್ಷ್ಮನಹೆಂಡತಿ ಸುಗ್ಗಲ ದೇವಿಯ ವರ್ಣನೆ ಬೇಲೂರಿನ ವಿಷ್ಣುವರ್ಧನನ ಶಾಸನದಲ್ಲಿ ಒಂದು ಪದ್ಯ ಹೀಗಿದೆ, ವಾರಿಜ ದರ್ಪಣೇಂದು ಮುಖಿ ಮರಣ ಹಂಸ ಮಯೂರ ಯಾನಕ ಲ್ಹಾರ ಕುರಂಗ ಮದ್ಯ ನಿಭಲೋಚನೆ ಕೋಕಿಲ ಚಾರುತೀರ ವೀರಣೂರವೆ ಕೋಕತಾಳ ಫಳ ಹೇಮ ಘಟಸ್ತನಿ ಯೆಂದೂಡಾರುಮೀ ಧಾರುಣಿಯೋಳ್ ವಧೂತ್ತಮಗೆ ಸುಗ್ಗಲದೇವಿಗೆ ಪೊಲ್ಪೆಯಸ್ವರೇ.

ಇಲ್ಲಿ ಕವಿ ಮುಖ ಕಟ್ಟು ಕಂಠ ಮುಂತಾದ ಆಕೆಯ ಅಂಗಾಂಗಗಳೊಂದೊಂದಿಗೂ ಮೂರು ಮೂರು ಹೋಲಿಕೆಗಳನ್ನು ಕೊಡುತ್ತಾನೆ ಇಷ್ಟರಿಂದಲೇ ಆಕೆಯ ರೂಪ

ನಮ್ಮ ಮುಂದೆ ಬಂದು ನಿಲ್ಲುತ್ತದೆ.

ನಮ್ಮ ನಾಡಿನಲ್ಲಿ ಅನೇಕ ಪರಾಕ್ರಮಗಳಿಂದ ಕೂಡಿ ಮೆರೆದ ವ್ಯಕ್ತಿಗಳು ತೀರ ಆಗಿಹೋದರಲ್ಲಿದೆ. ಶಾಸನಕವಿಗಳು ಅವರ ಹೆಸರನ್ನು ಚಿರಸ್ಥಾಯಿ ಮಾಡಿದ್ದಾರೆ ಅವರ ವರ್ಣನೆಯನ್ನು ಮಾಡುವಾಗ ಕವಿ ಬಳಸುವ ಭಾವ–ಅದಕ್ಕೆ ತಕ್ಕ ಭಾಷೆ ಶಬ್ದಗಳನ್ನು ಗಮನಿಸಬೇಕು ಎಷ್ಟೋಬಾರಿ ಒಂದು ಭಾವವನ್ನು ಅಭಿವ್ಯಕ್ತಪಡಿಸಲು ಅದಕ್ಕೆ ಶಬ್ದಜೋಡಣೆಯೂ ಕಾರಣವಾಗಿ ಅದರ ಉಕ್ತಿವೈಚಿತ್ರ್ಯದ ಸೊಗಸು ವ್ಯಕ್ತವಾಗುವುದುಂಟು ಆದ್ದರಿಂದಲೇ "ಶಬ್ದಾರ್ಥ ಸಹಿತ ಕಾವ್ಯಂ ಎಂಬ ಮಾತು ಪ್ರಸಿದ್ಧ ಅದನ್ನು ಇಲ್ಲಿ ಕಾಣಬಹುದು,

ಲಕ್ಷ್ಮೇಶ್ವರ: ಶಿರಹಟ್ಟಿ ತಾಲ್ಲೂಕು, ಧಾರವಾಡ ಜಿಲ್ಲೆ ಕಾಲ ಸು.1102 ಇದರಲ್ಲಿ ಭೀಮದಂಡಾಧೀಶನ ವರ್ಣನೆಯಿದೆ, ಪ್ರಭುಶಕ್ತಿ, ಮಂತ್ರಶಕ್ತಿ ಉತ್ಸಾಹ ಶಕ್ತಿ ಈ ರೀತಿಯ ಶಕ್ತಿ ತ್ರಯದ ವರ್ಣನೆ ಶಕ್ತಿಯುತವಾಗಿ ಇಲ್ಲಿ ಬಂದಿರುವುದನ್ನು ಕಾಣಬಹುದು.

**ದುರದೊಳ್ತಾನೆ ಧುರಂಧರಂ ಸಮುಚಿತಾಪ್ರಾಳೋ ಚನಾಗ್ರೇಸಕಾಂ ತರದೊಳಾನೆ ಸಮನ್ತ್ರಮಂತ್ರಿ**
**ಪವಿರಿಲ್ಲೆಂದಿಂತು ಕಾರುಣ್ಯದಿಂ ಪೋರೆದಾಳ್ದಂ ಚರಿತಕ್ಕೆ ಮೆಚ್ಚಿ ಸಿರಿದುಂಕೂಣಡೆದಣ್ಣೂಧಿನಾಥ**
**ರೊಳಿಂ ತೋವ್ವನ ಜೀಯ ಭಾಪ್ಪೆನಿಸಿದಂ ಶ್ರೀ ಭಿಮದಣೂಧಿಪಂ.**

ಹೊಸಪೇಟೆ ತಾಲ್ಲೂಕು ಬಳ್ಳಾರಿ ಜಿಲ್ಲೆ ಕಾಲ ಕ್ರಿ.ಶ 1411 ರಲ್ಲಿ ಕನ್ನಡಿಗರ ಕುಲಕ್ಕೆ ರತ್ನಗನ್ನಡಿಯಂತಿದ್ದ ಲಕ್ಷ್ಮೀಧರಾಮಾತ್ಯನ ವರ್ಣನೆ ಈ ಶಾಸನ ಕನ್ನಡ ಶಾಸನ ಸಾಹಿತ್ಯದಲ್ಲಿ ಒಂದು ಅಮೂಲ್ಯವಾದದ್ದು ಅದರಲ್ಲಿ ಇರುವ ಈ ಪದ್ಯವಂತೂ ಸಾಹಿತ್ಯದ ದೃಷ್ಟಿಯಷ್ಟೇ ಅಲ್ಲ ಸಂಸ್ಕೃತಿ ಔದಾರ್ಯ ಮುಂತಾದ ನಾನಾ ವಿಷಯಗಳಿಂದ ಕೂಡಿದ ನಾನಾ ದೃಷ್ಟಿಗಳಿಂದ ಗಮನಾರ್ಹವಾಗಿದ್ದು ಸಹೃದಯ ರನ್ನು ಆಕರ್ಷಿಸಿ ಆನಂದಿಸುತ್ತದೆ. ಈ ಶಾಸನದ ಉದ್ದೇಶ ಮಾದರಸ ನಾಯಣರ ತಂಗಿ ಸಿಂಗಲೆಯ ಐವರು ಮಕ್ಕಳಲ್ಲಿ ಲಕ್ಷ್ಮೀಧರ ಹಿರಿಯ. ಈತ ವಿಜಯನಗರದ ತೆಂಕಣ ಪಕ್ಕದಲ್ಲಿದ್ದ ಅಕೃಶಿಮವಾದ ಗುಹೆಯಲ್ಲಿ ಮಹಾಗಣಪತಿಯನ್ನು ಸ್ಥಾಪಿಸಿ ಅದಕ್ಕೆ ದತ್ತಿಗಳನ್ನು ಬಿಟ್ಟ ವಿಷಯ ತಿಳಿಸುವುದು 'ಮಧುರಕವಿ ಈತನ ಗುಣಗಾನ ಮಾಡುತ್ತಾ ಈತನ ತಾಯಿ ಬಾಲ್ಯದಲ್ಲಿ ಹಾಲೆರೆಯುತ್ ಕಿವಿಯಲ್ಲಿ ತೊಟ್ಟ ಹಾಲಿಗೂ ಈ ರೀತಿ ಉಪದೇಶಿಸುತ್ತಿದ್ದಳಂತೆ:

**ಕೆಟ್ಟೆಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ ಜ್ಜೀವಿತಿಯಳ್ಳಿಲ್ಕಿದನಾಥರಂ ಬಿಡಿಸು**
**ಮಿತ್ರರ್ಗ್ಗಿಂಬ ಕೆಯ್ನುಂಬಿದ ರ್ಗ್ಗೆವಿವಟ್ಟಗಿರು ಶಿಷ್ಯರಂ ಪೂರೆಯನುತ್ತಿಂತೆಲ್ಲಿವಂ ಪಿಂದೆತಾ ಯಪಿದಳ್ವಾಲೆ**
**ವಿತಿವಂದು ತೊಟ್ಟ ಕಿವಿಯೊಳ್ ಲಕ್ಷ್ಮೀಧರಾಮಕ್ಯನಾ**

ಇದು ಭಾವ–ಅರ್ಥ ಶಬ್ದಗಳಿಂದ ನಮ್ಮ ಮನಸ್ಸನ್ನು ಸೆಳೆಯುವುದಲ್ಲಿದೆ. ಇಲ್ಲಿ ಬಿಂಬಿತವಾಗಿರುವ ಕನ್ನಡ ಜನತೆಯ ಸಂಸ್ಕೃತಿಯು ಮನಸೆಳೆಯುವಂತಹುದು ಇದಲ್ಲಿದೆ. ದೇವಾಲಯಗಳ ವರ್ಣನೆ, ಸಮುದ್ರವರ್ಣನೆ, ಋತುವರ್ಣನೆ ಮುಂತಾದ ಸಾಂಪ್ರದಾಯಿಕ ವರ್ಣನೆಗಳನ್ನು ಶಾಸನಗಳಲ್ಲಿ ಕಾಣಬಹುದು ಮತ್ತು ಈ

ಶಾಸನಗಳನ್ನು ರಚಿಸಲು ಬಳಸಿದ ಛಂದೋ ಮಾಧ್ಯಮವೂ ಗಮನಿಸಬೇಕಾದ ಅಂಶ ಗದ್ಯ, ಪದ, ಚಂಪು, ರಗಳೆ.

ಶಾಸನಗಳಲ್ಲಿ ಸಾಹಿತ್ಯ ಅಂಶಗಳು ಹಾಸು ಹೊಕ್ಕಾಗಿವೆ ರಾಜ ಮನೆತನಗಳ ಆಸ್ಥಾನಗಳಲ್ಲಿದ್ದ ಸಾಹಿತಿಗಳು ತಮ್ಮ ಭಾಷಾ ಪ್ರೌಢಿಮೆಯನ್ನು ಬಳಸಿ ತಮ್ಮ ಲಿಪಿ, ವ್ಯಾಕರಣ, ಸಾಹಿತ್ಯ ವರ್ಣನೆಯನ್ನು ಮಾಡಿರುವುದು ವಿವಿಧ ಸಾಹಿತ್ಯ ನಿದರ್ಶನಗಳ ಮೂಲಕ ನಿರೂಪಿಸಲಾಗಿದೆ.

**ಅಡಿ ಟಿಪ್ಪಣಿಗಳು:**

1. ಶಿವಕೋಟ್ಯಾಚಾರ್ಯ, ಡಿ.ಎಲ್.ಎಲ್. (ಸಂ), (1970), ವಡ್ಡಾರಾಧನೆ ಭದ್ರಬಾಹುಭಟಾರರ ಕಥೆ, ಪು.ಸಂ. 75
2. ಚಿದಾನಂದಮೂರ್ತಿ ಎಂ., (1966), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯನಯನ, ಬೆಂಗಳೂರು.
3. ಯಜ್ಞವಲ್ಕ್ಯ ಸಂಹಿತೆ–1–318–20
4. ಚಿದಾನಂದಮೂರ್ತಿ ಎಂ., (1966), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯನಯನ, ಬೆಂಗಳೂರು, ಪು.ಸಂ. 31
5. ಚಿದಾನಂದಮೂರ್ತಿ ಎಂ., ಸಂಶೋಧನ ತರಂಗ, ಭಾಗ–02
6. ಶ್ರೀನಿವಾಸ ರಿತ್ತಿ, (2009), Epigraphia Carnatica XI, ಚಿತ್ರದುರ್ಗ ಜಿಲ್ಲೆ–43
7. Indian Antiquary–X, Page–61
8. ಚಿದಾನಂದಮೂರ್ತಿ ಎಂ., ಸಂಶೋಧನ ತರಂಗ, ಬಾಗ–02, ಪು.ಸಂ 199
9. ಶ್ರೀನಿವಾಸ ರಿತ್ತಿ, 2009, Epigraphia Carnatica–XIII, Page–329
10. ಬೊಂ.ಕಾ.ವ.ಜ., ಪು.ಸಂ. 204
11. Karnataka Inscriptions, Vol–I Page–40